JSS MAHAVIDYAPEETHA

# JSS COLLEGE FOR WOMEN

Affiliated to University of Mysore and Re-Accredited by NAAC with B+ [CGPA 2.74]

KOLLEGAL – 571440,

CHAMARAJANAGARDIST

☎: 08224-252149 □: 08224-256051Email: jsscwk@gmail.com www.jsscwkgl.org

# Annual Report 2022 –23



# ತ್ರಿವಿಧ ದಾಸೋಹಿಗಳು



ಶ್ರೀಮತ್ಸುತ್ತೂರು ವೀರಸಿಂಹಾಸನಾಧೀಶ್ವರರಾದ ಪರಮಪೂಜ್ಯ ಜಗದ್ಗುರು

**ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

ಸಂಸ್ಥಾಪಕರು, ಜೆಎಸ್‌ಎಸ್ ಮಹಾವಿದ್ಯಾಪೀಠ

# ANNUAL REPORT FOR THE YEAR 2022-2023

JSS College for Women, Kollegala was established in 1983.The College is affiliated to the University of Mysuru, Mysuru and has been recognized under section 2 (f) and 12 (B) by University Grant Commission. It is one of the four degree Colleges in the Town, the other three being a Government First Grade College and two unaided private institutions. Ours is the only college imparting higher education exclusively for women.

The College has been in the forefront of various endeavors to change the education scenario in this town, especially in the field of empowerment of women by imparting quality education. Though rather young in age, it has proved itself to be a centre for excellence and an instrument in higher education and socio- economic and cultural change. Started in a small building with an initial strength of 23 students and 5 teachers, the college moved into 3.96 acres of land, the campus surrounded by greenery and designed to suit the modern higher education Institution in the heart of the town in 1983. At present strength of the college increasing 500, of which nearly fifty percent belong to SC and ST running programs of BA, B.Com, BBA and Post Graduation in Master of Commerce (MCOM).

Higher education to women is incomplete without a hostel facility more so in the rural areas. Kollegala being a border taluk and many students coming from remote parts of hilly areas there was urgent need of a girl's hostel in the campus. It was fulfilled by the JSS MVP with UGC grants of Rs. 80 lakhs and its own funds of Rs. 70 lakhs with a multy storied hostel building for a accommodation of more than 200 students. The hostel is fully equipped with modern kitchen, dining hall, prayer hall and reading room. The College has produced a good number of students who are well placed in different walks of life and different parts of the country.

ಓಂ

॥ ಶ್ರೀ ಶಿವರಾತ್ರೀಶ್ವರಾಯ ನಮಃ ।


**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ-571129, ಮೈಸೂರು ಜಿಲ್ಲೆ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠ (ಮೈಸೂರು ಶಾಖೆ), ಮೈಸೂರು-570 025


10 ಜುಲೈ 2023

## ಶುಭ ಸಂದೇಶ

ಪ್ರಾಚೀನ ಭಾರತದಲ್ಲಿ ವಿವಿಧ ಕಾರಣಗಳಿಂದಾಗಿ ಬಹುಸಂಖ್ಯಾತ ಮಹಿಳೆಯರ ಚಿಂತನೆಗಳು, ಆಲೋಚನೆಗಳು ಕಾಡ ಬೆಳದಿಂಗಳಾಗಿದ್ದವು. 12ನೆಯ ಶತಮಾನದಲ್ಲಿ ಮಹಿಳೆಯರು ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಹೊಸ ಎತ್ತರಗಳಿಗೆ ಏರಿದರು. ಅವರ ಮಾತೃಪ್ರಜ್ಞೆ ತನ್ನ ಅದಮ್ಯ ಚೇತನದಿಂದ, ಅಂತರಂಗಿಕ ಔನ್ನತ್ಯದಿಂದ ತಲೆಮಾರುಗಳ ಕಾಲ ಸಮಾಜವನ್ನು ಪೋಷಿಸಿ, ಸಾಂಸ್ಕೃತಿಕ ಭಾರತವನ್ನು ಅಕ್ಕರೆಯಿಂದ ಕಾಪಾಡಿಕೊಂಡು ಬಂದಿರುವುದು ಇತಿಹಾಸದ ಸುವರ್ಣ ಅಧ್ಯಾಯ.

ಈಗ ಕಾಲ ಬದಲಾಗಿದೆ, ಮುಕ್ತತೆಯ ಗಾಳಿ ಎಲ್ಲೆಡೆ ಬೀಸುತ್ತಿದೆ. ಮಹಿಳಾ ವಿದ್ಯಾಭ್ಯಾಸ ಎಲ್ಲರ ಪಾಲಿಗೂ ಆದ್ಯತೆಯ ವಿಷಯವಾಗಿದೆ. ಹೊಸ ವಿದ್ಯಾಭ್ಯಾಸದಿಂದಾಗಿ ಆಧುನಿಕ ಮಹಿಳೆಯರಿಗೆ ವಿಪುಲವಾದ ಅವಕಾಶಗಳು ದೊರೆಯುತ್ತಿವೆ. ಪುರುಷರಿಗೆ ಸಮಾನವಾಗಿ, ಕೆಲವು ವೇಳೆ ಅವರನ್ನೂ ಮೀರಿಸುವಂಥ ಸಾಧನೆಯನ್ನು ಇಂದು ಮಹಿಳೆಯರು ತೋರುತ್ತಿರುವುದು ಆತ್ಮಪ್ರತ್ಯಯದ ವಿಷಯವೂ ಹೌದು.

ಆದರೂ ಎಲ್ಲೋ ಒಂದು ಕಡೆ ಹೆಣ್ಣುಮಕ್ಕಳನ್ನು ಇಂದಿಗೂ ಕಾಡುತ್ತಿರುವ ಹಿಂಸಾ ಪ್ರವೃತ್ತಿ ಸಂಪೂರ್ಣವಾಗಿ ನಿಲ್ಲಬೇಕಿದೆ. ವಿದ್ಯಾವಂತ ಮಹಿಳೆಯರು ಪ್ರತ್ಯಕ್ಷ ಹಾಗೂ ಪರೋಕ್ಷ ವಿರೋಧಾಭಾಸಗಳನ್ನು ಎದುರಿಸಲು ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಸನ್ನದ್ಧರಾಗಬೇಕು. ಅವರುಗಳು ಸುಸ್ಥಿತಿಯಲ್ಲಿಲ್ಲದ ಇತರ ಹೆಣ್ಣುಮಕ್ಕಳಿಗೆ ಸಹಾಯಹಸ್ತ ನೀಡುವ ಉದಾರ ಮನಸ್ಸನ್ನು ಬೆಳೆಸಿಕೊಳ್ಳಬೇಕು; ಸಮೃದ್ಧ ಭಾರತ ನಿರ್ಮಾಣಕ್ಕೆ ಬದ್ಧಕಂಕಣರಾಗಬೇಕು.

"ದರ್ಪಣ" ವಾರ್ಷಿಕ ಸಂಚಿಕೆಯು ವಿಚಾರಪರಿಪ್ಲುತವಾದ ಲೇಖನಗಳಿಂದ ಕೂಡಿ ಓದುಗರ ಮನ ಸೆಳೆಯಲೆಂದು ಹಾರೈಸುತ್ತೇವೆ.

– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು



ಶ್ರೀ ಕ್ಷೇತ್ರ, ಸುತ್ತೂರು



ಶ್ರೀಮಠದ ಪುನರ್ನಿರ್ಮಿತ ಕಟ್ಟಡ, ಸುತ್ತೂರು



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# NAAC

राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

**NATIONAL ASSESSMENT AND ACCREDITATION COUNCIL**

*An Autonomous Institution of the University Grants Commission*

# Certificate of Accreditation

The Executive Committee of the

National Assessment and Accreditation Council

is pleased to declare

JSS College for Women

Vidyanagara, Kollegal, Dist. Chamarajanagar, affiliated to University of Mysore, Karnataka as

Accredited

with CGPA of 2.74 on four point scale

at B$^+$ grade

valid up to May 30, 2027

Date : May 31, 2022

S. C. Sharma
Director

EC(SC)/108/3rd Cycle/KACOGN13213

## ಪ್ರಾಚಾರ್ಯರ ನುಡಿ......



ಸುತ್ತೂರು ಶ್ರೀ ಮಠದ ಗುರು ಪರಂಪರೆಗೆ ಭಕ್ತಿಪೂರ್ವವಾಗಿ ನಮಿಸುತ್ತಾ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಜಗದ್ಗುರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷರು, ಶಿಕ್ಷಣದಿಂದಲೇ ಮಹಿಳೆ ಮತ್ತು ಸಮಾಜದ ಸರ್ವಾಂಗೀಣ ಅಭಿವೃದ್ಧಿ ಎಂಬ ಮಂತ್ರವನ್ನು ಅನುಷ್ಠಾನಗೊಳಿಸಿದವರು, ಕಾಯಕ ತಪಸ್ವಿಗಳೂ ಆದ ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಮನದಾಳದಲ್ಲಿ ಸ್ಮರಿಸುತ್ತಾ ನಮ್ಮೆಲ್ಲರಿಗೂ ಚೈತನ್ಯ ಸ್ವರೂಪಿಗಳಾಗಿದ್ದು, ಸಂಸ್ಥೆ ಮತ್ತು ಸಮಾಜದ ಒಳಿತಿಗೆ ತಮ್ಮನ್ನೇ ಸಮರ್ಪಿಸಿಕೊಂಡವರು, ಸದಾಕಾಲ ನಮಗೆ ಮಾರ್ಗದರ್ಶನ ನೀಡಿ ಮುನ್ನಡೆಸುವವರು, ನಮ್ಮೆಲ್ಲರ ಆಶ್ರಯದಾತರೂ ಆದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಪಾದಾರವಿಂದಗಳಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 'ಹಳ್ಳಿಗಳು ಅಭಿವೃದ್ಧಿಯಾದರೆ ದೇಶವೇ ಅಭಿವೃದ್ಧಿಯಾದಂತೆ' ಎಂಬ ಪರಿಕಲ್ಪನೆಯ ಘೋಷ ವಾಕ್ಯವನ್ನು ಆದರ್ಶವಾಗಿರಿಸಿಕೊಂಡು, ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಗಗನ ಕುಸುಮವಾಗಿದ್ದ ಕಾಲದಲ್ಲಿ ಗಡಿ ಜಿಲ್ಲೆ ಚಾಮರಾಜನಗರದ ಕೊಳ್ಳೇಗಾಲ ಪಟ್ಟಣದಲ್ಲಿ ಮಹಿಳಾ ಕಾಲೇಜು ಆರಂಭಿಸಿ ಇಂದು ಸ್ನಾತಕೋತ್ತರ ಪದವಿವರೆವಿಗೂ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಸಂತಸದ ವಿಷಯ. ಪ್ರಸ್ತುತ ಕಾಲೇಜಿನಲ್ಲಿ ಮಾಹಿತಿ ಮತ್ತು ಸಂವಹನ ವ್ಯವಸ್ಥೆಯುಳ್ಳ ಗ್ರಂಥಾಲಯವಿದ್ದು, ಸುಸಜ್ಜಿತ ಗಣಕಯಂತ್ರ ಪ್ರಯೋಗಾಲಯ, ಭಾಷಾ ಪ್ರಯೋಗಾಲಯ, ತಂತ್ರಜ್ಞಾನ ವ್ಯವಸ್ಥೆಯುಳ್ಳ ತರಗತಿ ಕೊಠಡಿಗಳು, ವಿಚಾರ ಸಂಕಿರಣ ಕೊಠಡಿ, ಸಭಾಂಗಣ, ಇತ್ಯಾದಿ ಸೌಲಭ್ಯಗಳಲ್ಲದೆ 210 ವಿದ್ಯಾರ್ಥಿಗಳ ಸಾಮರ್ಥ್ಯವುಳ್ಳ ಮಹಿಳಾ ವಸತಿ ನಿಲಯವಿದೆ. ಇದೆಲ್ಲದರ ಪ್ರತಿಫಲವಾಗಿ ನ್ಯಾಕ್ ಸಂಸ್ಥೆಯಿಂದ ಕಾಲೇಜಿಗೆ "ಬಿ+" ಮಾನ್ಯತೆ ಲಭಿಸಿರುತ್ತದೆ.

ಪ್ರಸ್ತುತ ವಿದ್ಯಾರ್ಥಿಗಳ ಮನಸ್ಸು ಸರಿಯಾದ ದಾರಿಯಲ್ಲಿ ಸಾಗುವಂತೆ ಮಾಡಿ ಯೋಗ್ಯ ಪ್ರಜೆಯನ್ನಾಗಿ ಪರಿವರ್ತಿಸುವುದು ಅತಿಮುಖ್ಯ. ಚಂಚಲ ಮನಸ್ಸನ್ನು ಕಟ್ಟಿಹಾಕಿ, ಅದನ್ನು ಯೋಗ್ಯ ರೀತಿಯಲ್ಲಿ ಬೆಳೆಸಿ, ಪೋಷಿಸಿ ಭವಿಷ್ಯದ ಸಧೃಡ ಭಾರತದ ಉತ್ತಮ ಪ್ರಜೆಯನ್ನಾಗಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಯದ್ದು. ಈ ದಿಶೆಯಲ್ಲಿ ಪಠ್ಯದ ಜೊತೆಗೆ ಸಹ ಪಠ್ಯ ಕ್ಷೇತ್ರದಲ್ಲೂ ಕಾಲೇಜು ಸಕ್ರಿಯವಾಗಿದೆ. ಈ ಪೈಕಿ ವಿದ್ಯಾರ್ಥಿನಿಯರಲ್ಲಿ ಅಡಗಿರುವ ಸುಪ್ತ ಸಾಹಿತ್ಯಕ ಪ್ರತಿಭೆಯನ್ನು ಗುರುತಿಸಿ ಸಮಾಜಮುಖಿಯಾಗಿಸುವ ಉದ್ದೇಶದಿಂದ "ದರ್ಪಣ" ವಾರ್ಷಿಕ ಸಂಚಿಕೆಯನ್ನು ಹೊರತರಲಾಗುತ್ತಿದ್ದು ಇದು ವಿದ್ಯಾರ್ಥಿ ಸಮೂಹದ ಪ್ರತಿಭೆಗೆ ಹಿಡಿದ ಕನ್ನಡಿಯಾಗಲಿ ಎಂದು ಹಾರೈಸುತ್ತೇನೆ.

ಸಂಚಿಕೆಗೆ ಸಕಾಲದಲ್ಲಿ ಶುಭ ಸಂದೇಶಗಳನ್ನು ಕಳುಹಿಸಿಕೊಟ್ಟಿರುವ ಪೂಜ್ಯ ಶ್ರೀಗಳವರಿಗೆ ಹಾಗೂ ಗಣ್ಯ ಮಹನೀಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಾಲೇಜಿನ ಅಭಿವೃದ್ಧಿಗೆ ಕಾರಣಕರ್ತರಾದ ಗೌರ್ನಿಂಗ್ ಕೌನ್ಸಿಲ್‌ನ ಗೌರವಾನ್ವಿತ ಸದಸ್ಯರಿಗೆ, ವಿದ್ಯಾಪೀಠದ ಅಧಿಕಾರಿ ವರ್ಗದವರಿಗೆ, ವಿದ್ಯಾರ್ಥಿ ಪೋಷಕರಿಗೆ ಅಧ್ಯಾಪಕ ಹಾಗೂ ಅಧ್ಯಾಪಕೇತರ ಮಿತ್ರರಿಗೆ, ಕಾಲೇಜಿನ ಹಿತೈಷಿಗಳಿಗೆ, ಈ ಸಂಚಿಕೆಗೆ ಶ್ರಮಿಸಿರುವ ಸಂಪಾದಕರು, ಸಮಿತಿ ಸದಸ್ಯರು, ಮುದ್ರಣದ ಜವಾಬ್ದಾರಿ ಹೊತ್ತು ಸುಂದರವಾಗಿ ಸಂಚಿಕೆಯನ್ನು ಹೊರ ತಂದ ಶ್ರೀ ರಾಜೇಂದ್ರ ಪ್ರಿಂಟರ್ಸ್, ಮೈಸೂರು ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

(ಡಾ. ಎಂ. ಪ್ರಭು)

# Results

### I BA - I Sem

| Sl No | Subject | Appeared | Passed | Percentage |
|---|---|---|---|---|
| 1 | English | 22 | 17 | 77 |
| 2 | Kannada | 22 | 22 | 100 |
| 3 | History - Introduction to Ancient World Civilization | 22 | 22 | 100 |
| 4 | History : History of Ancient India | 22 | 22 | 100 |
| 5 | Digital Fluency | 22 | 22 | 100 |
| 6 | Managing Worforce | 22 | 22 | 100 |
| 7 | Health& Wellness and Yoga | 22 | 22 | 100 |
| 8 | Political Science : Basic Concepts in Political Science | 22 | 21 | 95 |
| 9 | Political Science : Political Theory | 22 | 22 | 100 |

### II BA - III Sem

| Sl No | Subject | Appeared | Passed | Percentage |
|---|---|---|---|---|
| 1 | English | 24 | 14 | 58 |
| 2 | Kannada | 24 | 23 | 96 |
| 3 | History : Rise of Modern West (1600-1871) | 24 | 23 | 96 |
| 4 | History : History of Moern India 1761-1947 | 24 | 24 | 100 |
| 5 | India And Indian Constitution | 24 | 24 | 100 |
| 6 | Political Science : Indian Government & Politics | 24 | 22 | 92 |
| 7 | Political Science : Parliamentary Procedures in India | 24 | 24 | 100 |
| 8 | R & R (S & G) | 24 | 24 | 100 |
| 9 | Financial Education and Investment Awreness | 24 | 24 | 100 |

### III BA - V Sem

| Sl No | Subject | Appeared | Passed | Percentage |
|---|---|---|---|---|
| 1 | History | 14 | 14 | 100 |
| 2 | Economics | 14 | 14 | 100 |
| 3 | Political Science | 14 | 14 | 100 |
| 4 | Kannada (GE) | 14 | 14 | 100 |

# Results

### I BCOM - I Sem

| Sl No | Subject | Appeared | Passed | Percentage |
|---|---|---|---|---|
| 1 | English | 61 | 54 | 88 |
| 2 | Kannada | 61 | 61 | 100 |
| 3 | Economics : Pre-Reforms Indian Economy | 61 | 59 | 97 |
| 4 | Financial Accounting - I | 61 | 52 | 85 |
| 5 | Digital Fluency | 60 | 60 | 100 |
| 6 | Management Principles & Application | 61 | 61 | 100 |
| 7 | Health & Wellness & Yoga | 61 | 61 | 100 |
| 8 | Principles Of Marketing | 61 | 61 | 100 |

### II BCOM - III Sem

| Sl No | Subject | Appeared | Passed | Percentage |
|---|---|---|---|---|
| 1 | English | 49 | 44 | 90 |
| 2 | Kannada | 49 | 48 | 98 |
| 3 | Business Statistics | 49 | 40 | 82 |
| 4 | Cost Accounting | 49 | 46 | 94 |
| 5 | Corporate Accounting | 49 | 47 | 96 |
| 6 | Artificial Intelligence | 49 | 49 | 100 |
| 7 | Economics : Rural Economics | 31 | 30 | 97 |
| 8 | Political Science : Citizen, Citizenship & the Indian Constitution | 18 | 18 | 100 |
| 9 | R and R ( S & G) | 49 | 49 | 100 |

### III BCOM - V Sem

| Sl No | Subject | Appeared | Passed | Percentage |
|---|---|---|---|---|
| 1 | Enterpreneurship Development | 59 | 58 | 98 |
| 2 | IFRS | 59 | 56 | 95 |
| 3 | Corporate Tax Planning | 59 | 58 | 98 |
| 4 | Financial Management - I | 59 | 55 | 93 |
| 5 | Advanced Cost & Management Account | 59 | 58 | 98 |
| 6 | Inirect Taxes - I | 59 | 57 | 97 |

### I BBM - I Sem

| Sl No | Subject | Appeared | Passed | Percentage |
|---|---|---|---|---|
| 1 | English | 19 | 17 | 90 |
| 2 | Kannada | 19 | 19 | 100 |
| 3 | Fundamentals of Business Accounting | 19 | 19 | 100 |
| 4 | Marketing Management | 19 | 19 | 100 |
| 5 | Management Principles & Practice | 19 | 19 | 100 |
| 6 | Economics : Development Studies | 19 | 19 | 100 |
| 7 | Health & Wellness and Yoga | 19 | 19 | 100 |
| 8 | Digital Fluence | 19 | 19 | 100 |

# Courses offered

| ಪದವಿ | ಐಚ್ಛಿಕ ವಿಷಯಗಳು | ಮಾಧ್ಯಮ |
|---|---|---|
| ಬಿ.ಎ: | ◆ ಇತಿಹಾಸ ◆ ರಾಜ್ಯಶಾಸ್ತ್ರ<br>◆ ಇತಿಹಾಸ ◆ ಅರ್ಥಶಾಸ್ತ್ರ<br>◆ ಅರ್ಥಶಾಸ್ತ್ರ ◆ ರಾಜ್ಯಶಾಸ್ತ್ರ | ಕನ್ನಡ |
| ಬಿ.ಕಾಂ<br>ಬಿ.ಬಿ.ಎ. | ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪಠ್ಯ ವಿಷಯಗಳು | ಇಂಗ್ಲಿಷ್ |

## ಸರ್ಟಿಫಿಕೇಟ್ ಕೋರ್ಸ್‌ಗಳು

◆ ಭಾರತೀಯ ಸಂಸ್ಕೃತಿ ◆ ಕಮ್ಯೂನಿಕೇಟಿವ್ ಇಂಗ್ಲಿಷ್

◆ ಆಫೀಸ್ ಆಟೋಮೇಷನ್ ◆ ಅಡ್ವಾನ್ಸ್ ಎಕ್ಸೆಲ್ ◆ ಪೈಥಾನ್








# Kannada Department

ಜನಪದ ಸಾಂಸ್ಕೃತಿಕ ಪರಂಪರೆಗೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತುಂಬಾ ಪ್ರಸಿದ್ಧವಾಗಿದೆ. ಈ ಪಟ್ಟಣದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜು 30ಕ್ಕಿಂತಲೂ ಹೆಚ್ಚು ವಂಸತಗಳನ್ನು ಪೂರೈಸಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸುವುದರ ಜೊತೆಗೆ ವಿಶೇಷವಾಗಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಾ ದೇಶದ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಸಾಧಿಸಲು ಶ್ರಮಿಸುತ್ತಿದೆ.

ದಿನಾಂಕ : 14-11-2022ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಕೊಳ್ಳೇಗಾಲದ ನಿಸರ್ಗ ಶಿಕ್ಷಣ ಮಹಾವಿದ್ಯಾನಿಲಯದ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಂ. ಸೋಮಣ್ಣ ಹಾಗೂ ಉದ್ಘಾಟಕರಾಗಿ ಕೊಳ್ಳೇಗಾಲ ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನಾಗರಾಜು ಎಸ್. ಕೊಂಗರಳ್ಳಿ ಅವರು ಆಗಮಿಸಿದ್ದರು.

ದಿನಾಂಕ : 05-05-2023ರಂದು ಕನ್ನಡ ಸಾಹಿತ್ಯ ಪರಿಷತ್ತು ಕೊಳ್ಳೇಗಾಲ ತಾಲ್ಲೂಕು ಘಟಕದ ಸಹಯೋಗದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 109ನೆಯ ಸಂಸ್ಥಾಪನಾ ದಿನಾಚಾರಣೆಯನ್ನು ಏರ್ಪಡಿಸಲಾಯಿತು. ಸಾಹಿತಿಗಳಾದ ಶ್ರೀ ಶಿವಣ್ಣ ಇಂದ್ವಾಡಿಯವರು "ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕದ ಅಭಿವೃದ್ಧಿ" ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಬೇರೆ ಕಾಲೇಜುಗಳಲ್ಲಿ ಏರ್ಪಡಿಸುವ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ವಚನಗಾಯನ ಹೀಗೆ ಮತ್ತು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ನಮ್ಮ ವಿಭಾಗದ ವತಿಯಿಂದ ಮಾರ್ಗದರ್ಶನ ನೀಡಲಾಗುತ್ತಿದೆ.

ಶ್ರೀ ಎಚ್.ಎಂ. ನಾಗಭೂಷಣ
ಮುಖ್ಯಸ್ಥರು

# English Department

The department of English play an important role in the acquisition of the language skills in the under graduate students by creating the congenial learning environment.

It chalks out the learning activities to enable the learners to grasp the basic language skills : Listening, Speaking, Reading and Writing. The department makes an attempt to motivate, create and sustain the interest among the learners. The students are involved in various literary activities and other co-curricular activities of the college with the intervention of the teachers in honing up the language skills amongst the students. As our college is affiliated to the University of Mysore we follow the academic programmes as per the instructions of the university and also the instructional materials prescribed for study.

**Motivational programmes :**

As soon as the admission is over the fresher's are given free interactive classes in order to help them to acquaint themselves to the emerging trends in the area of language and literature prescibed for study. A bridge course is conducted in order to ward off the fear of learning English as a foreign language.

The following activities are conducted during the academic year 2022-2023 to enable the students to grasp the language and content better :

* The MP3 tracks of the prescribed poems were played for the benefit of the I & II Semester BA, B.Com and BBM students.
* A fils based on the play "Julius Caesar" was shown to the students of 4th Semester B.A.
* Study materiasl in PDF format
* Spoken English classes for the I B.A., B.Com. & B.B.A. students.

Mahesh H.C.
Department of English

# Political Science Department

ಪ್ರಾಚೀನ ಕಾಲದಿಂದ ಪ್ರಾರಂಭಿಸಿ ಆಧುನಿಕ ಕಾಲದವರೆಗೂ ರಾಜ್ಯಶಾಸ್ತ್ರದ ಅಧ್ಯಯನವು ಬಹು ಪ್ರಮುಖವಾದ ಅಂಶವಾಗಿದ್ದು, ಮಾನವನ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಜಾರ್ಜ್‌ಬರ್ನಾರ್ಡ್ ಷಾ ಅಭಿಪ್ರಾಯ ಪಟ್ಟಿರುವಂತೆ, "ರಾಜ್ಯವೊಂದರಿಂದಲೇ ನಾಗರಿಕತೆಯನ್ನು ರಕ್ಷಿಸಲು ಸಾಧ್ಯ" ಎಂಬ ಮಾತಿನಂತೆ ಪ್ರತಿಯೊಬ್ಬ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವ ನಿಟ್ಟಿನಲ್ಲಿ ರಾಜ್ಯಶಾಸ್ತ್ರ ವಿಭಾಗವು ಈ ಕೆಳಕಂಡ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

ದಿನಾಂಕ 26-11-2022 ರಂದು "ಸಂವಿಧಾನ ದಿನ"ವನ್ನು ಆಚರಿಸಲಾಯಿತು. ಸಂವಿಧಾನದ ದಿನವನ್ನು ಕುರಿತು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಕೆ.ಆರ್. ಗುರುಪ್ರಸಾದ್‌ರವರು ಮಾತನಾಡಿದರು. ಪ್ರಾಂಶುಪಾಲರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಸಹಾಯಕ ಪ್ರಾಧ್ಯಾಪಕರು ಹಾಗೂ ಎಲ್ಲಾ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 10-12-2022 ರಂದು "ಮಾನವ ಹಕ್ಕುಗಳ ದಿನಾಚರಣೆ"ಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಕೆ.ಆರ್. ಗುರುಪ್ರಸಾದ್‌ರವರು ಮಾನವ ಹಕ್ಕುಗಳ ಮಹತ್ವವನ್ನು ತಿಳಿಸಿಕೊಟ್ಟರು. ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ.ಎಸ್. ಪ್ರಕಾಶರವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಪ್ರಾಂಶುಪಾಲರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

ದಿನಾಂಕ 26-01-2023 ರಂದು 74ನೇ "ಗಣರಾಜ್ಯೋತ್ಸವವನ್ನು" ಆಚರಿಸಲಾಯಿತು. ಸಾಮಾಜಿಕ ಕಾರ್ಯಕರ್ತರಾದ ಶ್ರೀಯುತ ಮಹಿಪಾಲರವರು ಧ್ವಜಾರೋಹಣ ಮಾಡಿ, ಗಣರಾಜ್ಯೋತ್ಸವ ಸಂದೇಶವನ್ನು ನೀಡಿದರು. ಪ್ರಾಂಶುಪಾಲರು ಅಧ್ಯಕ್ಷತೆಯ ನುಡಿಗಳನ್ನು ನುಡಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 4-07-2023 ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ "ಜಿ20 ಮತ್ತು ಭಾರತದ ವಿದೇಶಾಂಗ ನೀತಿ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಂಡ್ಯ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ॥ ಹೆಚ್.ಎನ್. ಸತೀಶ್ ರವರು ಉಪನ್ಯಾಸ ನೀಡಿದರು. ಪ್ರಾಂಶುಪಾಲರು ಅಧ್ಯಕ್ಷತೆಯ ನುಡಿಗಳನ್ನು ನುಡಿದರು. ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜಿ.ಎಸ್. ಸುಮ, ಗ್ರಂಥಾಲಯ ವಿಭಾಗದ ಮುಖ್ಯಸ್ಥರಾದ ಮಹಾದೇವಸ್ವಾಮಿ, ಅಧ್ಯಾಪಕರು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಕೆ.ಆರ್. ಗುರುಪ್ರಸಾದ್
ಮುಖ್ಯಸ್ಥರು

## Economics Department

ಅರ್ಥಶಾಸ್ತ್ರ ವಿಭಾಗವು ಪಠ್ಯಕ್ರಮದ ಜತೆಗೆ ಸಹಪಠ್ಯ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳ ಸಮಗ್ರ ವಿಕಸನಕ್ಕೆ ಅವಕಾಶ ಮಾಡಿಕೊಡುತ್ತದೆ.

ದಿನಾಂಕ 24-02-2023 ರಂದು "ಕೇಂದ್ರ-ರಾಜ್ಯ ಬಜೆಟ್ ಒಂದು ಪರಾಮರ್ಶೆ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.

ದಿನಾಂಕ 22-06-2023 ರಂದು "ನಿರಪೇಕ್ಷ ವೆಚ್ಚ ಸಿದ್ಧಾಂತ" ಎಂಬ ವಿಷಯದ ಮೇಲೆ ಅಂತಿಮ ಬಿ.ಎ. ವಿದ್ಯಾರ್ಥಿಯಾದ ಕುಮಾರಿ ಜಿ. ರಾಜೇಶ್ವರಿ ವಿಚಾರ ಮಂಡಿಸಿದರು.

ದಿನಾಂಕ 11-07-2023 ರಂದು "ವಿಶ್ವ ಜನಸಂಖ್ಯಾ ದಿನ"ದ ಪ್ರಯುಕ್ತ ಅಂತಿಮ ಬಿ.ಎ. ವಿದ್ಯಾರ್ಥಿನಿಯರಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ಪುಟ್ಟಮ್ಮ
ಮುಖ್ಯಸ್ಥರು

## History Department

ದಿನಾಂಕ 23-1-2023 ರಂದು ಸುಭಾಷ್‌ಚಂದ್ರ ಬೋಸ್ ರವರ 126ನೇ ಜಯಂತಿ ಕಾರ್ಯಕ್ರಮ ನಡೆಸಲಾಯಿತು. ವಿದ್ಯಾರ್ಥಿನಿಯರಾದ ಸರಸ್ವತಿ, ವಜ್ರ ಇವರು ಸುಭಾಷ್‌ಚಂದ್ರ ಬೋಸರ ಜೀವನ ಮತ್ತು ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿಸಿದರೆ ಅಧ್ಯಾಪಕರಾದ ಹೆಚ್.ಜಿ. ನಟರಾಜನ್ ಸುಭಾಷ್‌ಚಂದ್ರ ಬೋಸರ ಹೋರಾಟದ ವಿವಿಧ ಮಜಲುಗಳ ಬಗ್ಗೆ ತಿಳಿಸಿದರು.

ದಿನಾಂಕ 28-1-23 ರಂದು ಲಾಲಾ ಲಜಪತ್‌ರಾಯ್‌ರವರ ದಿನಾಚರಣೆ ಆಚರಿಸಲಾಯಿತು. ದಿನಾಂಕ : 30-1-2023 ರಂದು ಹುತಾತ್ಮರ ದಿನ ಆಚರಿಸಲಾಯಿತು.

ಶ್ರೀ ಹೆಚ್.ಜಿ. ನಟರಾಜನ್
ಮುಖ್ಯಸ್ಥರು

# Department of Commerce

The Department of Commerce was established in 1984. Presently, the Department of Commerce has evolved into a gateway to excellence. The Department is having Commerce club. The Club regularly conducts special lectures, Industrial visits, Personality development, workshops, seminars, group discussions etc. to suit the changing needs of the society.

Department imparts the quality Education and Training to students for shaping their careers for a sustainable corporate world. The Department of Commerce aims to provide academically efficient and professionally relevant teaching in the areas of Accounting and Finance. Along with Academic Knowledge, the department also trains potential candidates to face the challenges in life and their career by providing many value-added Programs to enhance their expertise.

The department was organized field visit to MYMUL, Mysore on 1-7-2023. The final year B.Com. and second year B.Com. students, totally 104 students visited the MYMUL. They acquired practical knowledge with respect to methods of costing in cost accounting course. This visit enhances the learning capacity of the students.

Department is actively arranged special lectures by inviting experts and resource persons for enabling the students to be very much potential in this global competitive world. The details are given below.

## SPECIAL LECTURES

| Sl.No. | Date | Resources person and address | Topic |
|---|---|---|---|
| 1 | 07-02-2023 | Sri Venkata Rao<br>Branch Manager, SBI, Kollegal | Services of Bank |
| 2 | 06-05-2023 | Sri Karthik C.S.<br>Faculty<br>Grow and Knowise, Bangalore | Financial Wellness Program |
| 3 | 21-06-2023 | Sri Manojkumar<br>Lotus knowlwealth Company<br>Mysore | Mutual Fund & Financial Planning |

**Smt. S. Mamatha**
**HoD**

# Department of Business Administration

The Bachelor of Business Administration programme, started in the year 2008-09 exclusively for girls under self financing scheme in the college to develop their managerial abilities, not only enables students to achieve a professional qualification but also assists them relating to their skills to the needs of business enterprise. The programme will equip students with communication skill, team leadership skill and other intellectual skills.

Department maintains question bank so that teacher and students can refer them to have proper understanding of the pattern of examination and evaluation process.

As a regular feature this year also Department conducted bridge course classes for non-commerce students. In the month of July the Department conducted orientation programme for the first year students to acquaint themselves to the new environment.

Department always encourages the students by preparing and sending them to campus interview arranged in sisster institution and other colleges. Department organises special lectures, workshops, seminars by students, group discussions, mock-interviews, to bring about attitudinal chanes in students.

The First year BBA students were visited Textile Showrom, Kollegal. They acquired practicul knowledge by collecting final accounts of the enterprise with respect to financial position of the concern in fundamentals of accounting course. This visit enhances to learning capacity of the students.

Department conducted special lectures by inviting experts and resource persons for enabling the students to be very much potential in this global competitive world. Their details are given below.

## SPECIAL LECTURES

| Sl.No. | Date | Resources person and address | Topic |
|---|---|---|---|
| 1 | 07-02-2023 | Sri Venkata Rao<br>Branch Manager, SBI, Kollegal | Services of Bank |
| 2 | 06-05-2023 | Sri Karthik C.S.<br>Faculty<br>Grow and Knowise, Bangalore | Financial Wellness Program |
| 3 | 21-06-2023 | Sri Manojkumar<br>Lotus knowlwealth Company<br>Mysore | Capital market awareness |

**Smt. S. Mamatha**
**HoD**

# Post Graduate Department of Commerce

The Department was started in 2001 - 02 with main objective of taking the Post Graduate degree in Commerce to the doorsteps of Commerce graduate in the remote taluk place of Chamrajnagar Dist. The vision of the department as to develop this post graduate centre as a hub of research activities and extension services useful to the villagers. In these 23 years department is able to increase the number of M.Com degree holders in this area. We are trying to have research projects in various topic of commerce.

The Department has well qualified and experienced teaching facilities. Teachers are enabled in using ICT for effective teaching. Class rooms and seminar hall have LCD facilities. The Department is using well equipped Internet, enabled Computer Lab in the college for data sourcing and research activities. The computer lab has SPSS software in all our systems.

To enhance the practical skills and to bring out the potential and other hidden talents of our students we conduct knowledge series workshops, industry visits, additional certificate course, communication & computer lab classes, peer presentation, tutor and special classes with question bank, placement training, quiz, role play, sports and many other activities.

Library is well equipped with latest editions of books abundant for our students. It has professional journal including facility of online journals. The department is proud that 22 batches have already completed their degree successfully. Most of the students are well placed by occupying better positions.

We have very good results all the years with many ranks to the University. As per the Mysore University 2021-2022 results, all the students have secured first class with more than 6 grade points under CBCS. The Department arranged special lecture programmes and workshop for the benefit of students. The department encourages and motivates the students to participate and present paper in National and International Conferences, Webinars and workshops.

Kum Saraswathi S

HOD

# Library & Information Centre

The JSS College Library and Information Centre was established in the year 01-08-1983 and started functioning in the present city i.e. Kollegal, Later it has been shifted to the own campus in the year 1995.The Library and Information Centre got its own separate department in the magnificent block since 2005 with adequate area of 3419.46Sq.ft. The Library and Information Centre started functioning from 2006 with the same area. The building accommodates sections such as Stacks, Reference, Circulation, Periodicals, Technical Section, Digital Library, Learning Resource Centre, Librarian Chamber, Photo Copying Section, AV Aids Section and Office.

The Library and Information Centre has a collection of 12,829 Volumes in the year 2007-08 with 452 users and 55 staff members. At present, the Library has its stock about 15110 Volumes of books and 30 current periodicals at national and state level as print copies to cover a wide range of subjects to facilitate users to access current academic and learning Literature. Presently the library has 1+2 library staff members serving 260 members in addition, the academic community of other institutions and general public has been using the library resources. Of organizes "The User Education / Orientation Programmes" for to the students & Staff in beginning & amp; between of every academic year.

The Library and information centre management is the base and core activity which helps the user community in identifying and accessioning knowledge resources in an academic institution effective management of the library support excellence in the students support divergent research needs on and off the campus, continues to adopt change and contributes in strengthening the academic life in the campus of the institution in all respect.

**Maintenance of Service Area :**

Calm and neat atmosphere has been maintained users are provided with a clean and silent environment including dust free environment in the stack and reading areas. For their cleaning and mopping activities including maintenance of reading tables, chairs are outsourced.

**Special Deposit Scheme :**

Under this scheme it provides an opportunity to off campus users especially economic backward classes to avail the books and other materials at affordable cost.

**Library Book Exhibition :**

As regular annual features a set of reputed book publishers and distributors are invited to display the recently published books in an exhibition. So that book selection process is possible for faculty members and students.

# Library & Information Centre

**Extended Hours of Services :**

It is kept open from 10.00am to 5 Pm except Sunday (Saturday 10 am to 1.30pm) and public holidays. Circulation of books is available during the library hours.

**Information Literacy Programme :**

It conducts an orientation programme for the new students admitted every year. They find it useful to know about the resources available in their discipline and all other facilities they are provided.

**Library Best User Award :**

It provides every year best user award in the form of Cash/Book and certificate to the best user from the each discipline. So that more students can be attracted to visit the library and use the resource.

**User Feedback Practice Through Suggestin Box & Feebback From :**

It has user feedback practice by maintaining suggestion box and getting user feedback on various services provided to them. So that user satisfaction level can be increased.

**Internet Access Facility - Easy Access To E Resources:**

It provides internet access facilities to the users for e mails, browsing internet accessioning e- resources/ e journals database OPAC in easylib software. It is fully computerized with Barcode technology and also LAN facility, UPS connectivity etc.

**Automation of in House Services :**

It provides a database of all the documents available in the library to fully automate all the library functions and services in networked environment.

## IN HOUSE PUBLICATIONS:

1.Library user Manual Annually

2. LIBRARY BILINGUAL MONTHLY NEWS LETTER "ತಿಂಗಳ ತಿರುಳು"

**Library resources and others :**

| SI. | Particulars | Nos |
|---|---|---|
| 1 | Books | 15110 |
| 2 | Periodicals | 30 |
| 3 | News papers | 12 |
| 4 | Cds | 310 |
| 5 | Atlasses | 21 |
| 6 | Maps | 41 |

# Library & Information Centre

## Facilities and Services Offered by the Department

**Facilities**

- Text books
- Reference books
- Journals
- Magazines
- News papers
- Biographies
- Old Question papers
- Dictionaries and Encyclopedias
- Gazetteers
- Atlases
- Maps
- Local History Guides
- CD-ROM
- E-Resource Centre with INTERNET

**Services**

- Information display
- Current Awareness Services
- Reference Services
- Circulation
- Referral Services
- Chat with Librarian
- Photocopying Services
- CD-Rom Services
- Open Access to library members only
- Computerized Library Services
- Easy Access through EASYLIB Software
- OPAC
- INFLIBNET N-List Programme service
- E-Resource Centre with Internet services

## Reference Section

The reference section contains general reference like Dictionaries, Encyclopedias, Year Books, Directories, Gazetteers, Atlases, Maps, Handbooks, and Books on Competition, Entrance exams, Career development and personality development.

## Periodical Section

It maintains 30 subscribed periodicals to fulfill the current teaching and learning requirement.

## New Paper Section

It maintains 19 subscribed newspapers out of which 8 are national and 8 Regional. The current information can be accessed by these newspapers.

## Special Collection Section

A special collection of around more than 2500 books and other documents are organized and accessible to the users. Subject wise list of book is readily available with separate section for reference only.

Sri S. Mahadevaswamy

# Cultural Forum

ಭಾರತೀಯ ಸಂಸ್ಕೃತಿ ಇಡೀ ಜಗತ್ತಿಗೆ ಮಾದರಿ, ಭಾರತ ಎಂದ ಕೂಡಲೇ ಎಲ್ಲರ ಮನದಲ್ಲಿ ಮೂಡುವುದು ಇಲ್ಲಿನ ಆಚಾರ, ಸಂಪ್ರದಾಯ, ಸಂಸ್ಕೃತಿ, ಬಣ್ಣ ಬಣ್ಣದ ಹಬ್ಬಗಳು, ಮನಸೆಳೆಯುವ ಮನಗಳು ಇತ್ಯಾದಿ. ಗ್ರಾಮಗಳಿಂದ ತುಂಬಿರುವ ಈ ದೇಶದಲ್ಲಿ ಗ್ರಾಮಗಳ ದೈನಿಕ ಬದುಕು ಆರಂಭವಾಗುವುದು ಜನಪದ ಹಾಡು, ಹಬ್ಬ, ಆಚರಣೆಗಳಿಂದ. ಆದರೆ ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಯುಗವು ನಮ್ಮ ಪರಂಪರಾಗತ ಕಲೆಗಳನ್ನು ಮರೆಸುವಂತೆ ನಾಗಾಲೋಟದಲ್ಲಿ ಓಡುತ್ತಿದೆ.

ವಿಜ್ಞಾನ – ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ಯುಗದ ಕೇಂದ್ರ ಬಿಂದುಗಳಾದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಶೈಕ್ಷಣಿಕ ಮತ್ತು ಶೈಕ್ಷಣೇತ್ತರ ಚಟುವಟಿಕೆಗಳು ಪ್ರಮುಖ ಪಾತ್ರವಹಿಸುವ ಹಿನ್ನಲೆಯಲ್ಲಿ ನಮ್ಮ ಕಾಲೇಜಿನಲ್ಲಿ ಸಾಂಸ್ಕೃತಿಕ ಸಾಹಿತ್ಯಕ ವೇದಿಕೆಯನ್ನು ಸ್ಥಾಪಿಸಿ ತನ್ಮೂಲಕ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರಾರಂಭದಿಂದಲೂ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ಹೆಮ್ಮೆಯ ಸಂಗತಿ.

ಸಾಂಸ್ಕೃತಿಕ ವೇದಿಕೆಯು ಕಾಲೇಜಿನಲ್ಲಿ ನಡೆಯುವ ಅಂತರ ತರಗತಿ ಹಾಗೂ ಅಂತರ ವಲಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿನಿಯರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡುವ ಹಿನ್ನಲೆಯಲ್ಲಿ ದಿನಾಂಕ 30–9–2022 ರಂದು 2022–23ನೆಯ ಸಾಲಿಗೆ ಸಾಂಸ್ಕೃತಿಕ–ಸಾಹಿತ್ಯಕ ವೇದಿಕೆಯ ಸಂಚಾಲಕರು, ಸದಸ್ಯರು ಹಾಗೂ ತರಗತಿ ಪ್ರತಿನಿಧಿಗಳನ್ನು ಈ ಕೆಳಕಂಡಂತೆ ಆಯ್ಕೆ ಮಾಡಲಾಯಿತು.

| | | | |
|---|---|---|---|
| 1. | ಶ್ರೀಮತಿ ಎನ್. ಭ್ರಮರಾಂಬ | ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗ | ಸಂಚಾಲಕರು |
| 2. | ಶ್ರೀಮತಿ ಆರ್.ಪಿ. ಸೌಮ್ಯ | ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| 3. | ಶ್ರೀಮತಿ ಮಟ್ಟಮ್ಮ | ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| 4. | ಶ್ರೀಮತಿ ಎನ್. ವಾಣಿ | ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

2022–23ನೆಯ ಸಾಲಿನ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ತರಗತಿ ಪ್ರತಿನಿಧಿಗಳು

| | | | | |
|---|---|---|---|---|
| ಅಧ್ಯಕ್ಷೆ | – | ನಂದಿತಾ | ತೃತೀಯ ಬಿ.ಕಾಂ. | |
| ಕಾರ್ಯದರ್ಶಿ | – | ಜಯಲಕ್ಷ್ಮಿ | ತೃತೀಯ ಬಿ.ಎ. | |
| | 1. | ಎಂ.ಎಸ್. ಹರ್ಷಿತ | ಪ್ರಥಮ ಬಿ.ಎ. | ತರಗತಿ ಪ್ರತಿನಿಧಿ |
| | 2. | ಜೆ. ಪವಿತ್ರ | ದ್ವಿತೀಯ ಬಿ.ಎ. | ತರಗತಿ ಪ್ರತಿನಿಧಿ |
| | 3. | ಜಯಲಕ್ಷ್ಮಿ | ತೃತೀಯ ಬಿ.ಎ. | ತರಗತಿ ಪ್ರತಿನಿಧಿ |
| | 4. | ಎಂ. ಅಪೂರ್ವ | ಪ್ರಥಮ ಬಿ.ಕಾಂ. | ತರಗತಿ ಪ್ರತಿನಿಧಿ |
| | 5. | ಟಿ.ಎಸ್. ಸಿಂಚನಾ | ದ್ವಿತೀಯ ಬಿ.ಕಾಂ. | ತರಗತಿ ಪ್ರತಿನಿಧಿ |
| | 6. | ಎಸ್. ನಂದಿತಾ | ತೃತೀಯ ಬಿ.ಕಾಂ. | ತರಗತಿ ಪ್ರತಿನಿಧಿ |
| | 7. | ಎ. ಸ್ಪರ್ಶಿತ | ಪ್ರಥಮ ಬಿ.ಬಿ.ಎ. | ತರಗತಿ ಪ್ರತಿನಿಧಿ |

# Cultural Forum

1. ದಿನಾಂಕ 24-11-2022 ರಂದು ಪ್ರಥಮ ಪದವಿ ವಿದ್ಯಾರ್ಥಿನಿಯರಿಗೆ ಸ್ವಾಗತ ಸಮಾರಂಭವನ್ನು ಹಿರಿಯ ವಿದ್ಯಾರ್ಥಿನಿಯರು ಏರ್ಪಡಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಸೋಮಶೇಖರ್, ಮುಖ್ಯಸ್ಥರು, ಸಮಾಜ ಕಾರ್ಯ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಾಲೇಜು ಊಟಿ ರಸ್ತೆ ಮೈಸೂರು ಇವರು ನೆರವೇರಿಸಿದರು.

2. ದಿನಾಂಕ 9-12-2022 ಹಾಗೂ 10-12-2022 ರಂದು ಪ್ರತಿಭಾಶೋಧ ಕಾರ್ಯಕ್ರಮವನ್ನು ಹೆಚ್.ಜಿ. ನಟರಾಜನ್, ಮುಖ್ಯಸ್ಥರು, ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಂಚಾಲಕರು ಇವರು ಉದ್ಘಾಟಿಸಿದರು. ಇದರ ಪ್ರಯುಕ್ತ ಭಾವಗೀತೆ, ಜನಪದ ಗೀತೆ, ಭಕ್ತಿಗೀತೆ, ಸಮೂಹನೃತ್ಯ, ಚಿತ್ರಗೀತೆ ಏಕವ್ಯಕ್ತಿ ನೃತ್ಯ ಸಮೂಹ ಗಾಯನ, ಮಿಸ್ ಜೆಎಸ್‌ಎಸ್, ಕುಕ್ಕಿಂಗ್ ವಿತೌಟ್ ಫೈರ್, ರಂಗೋಲಿ ಸ್ಪರ್ಧೆ, ಕೇಶವಿನ್ಯಾಸ, ಮೆಹಂದಿ ಬಿಡಿಸುವುದು, ಅಂತ್ಯಾಕ್ಷರಿ ಸ್ಪರ್ಧೆಗಳನ್ನು ನಡೆಸಲಾಯಿತು.

3. ಸುತ್ತೂರು ಜಾತ್ರೆಯಲ್ಲಿ ನಡೆದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕುಮಾರಿ ಎನ್. ವನಿತಾ ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಬಹುಮಾನ ಪಡೆದಿರುತ್ತಾರೆ.

4. ದಿನಾಂಕ 20-12-2022 ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಯಿತು. ಉದ್ಘಾಟನೆಯನ್ನು ಎಸ್.ಎಸ್. ದಶರಥ, ವಿಭಾಗೀಯ ಸಂಚಾರ ನಿಯಂತ್ರಣಾಧಿಕಾರಿ ನೆರವೇರಿಸಿದರು.

5. ದಿನಾಂಕ 12-6-2023 ರಿಂದ 17-6-2023 ರವರೆಗೆ ದಕ್ಷ- 2ಕೆ23 ಕಾರ್ಯಕ್ರಮವನ್ನು ಆಯೋಜಿಸಿದ್ದು ಸದರಿ ಕಾರ್ಯಕ್ರಮದ ಅಂಗವಾಗಿ Waste Management, Vegetable Carving, Fashion Show, Village Day, Fun Fair ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು ಹಾಗೂ ಅಂತಿಮವಾಗಿ ಸರಸ್ವತಿ ಪೂಜೆಯನ್ನು ನೆರವೇರಿಸಲಾಯಿತು.

6. ದಿನಾಂಕ 27-6-2023 ರಂದು ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ ಮೈಸೂರು. ಇಲ್ಲಿ ಏರ್ಪಡಿಸಿದ್ದ ಅಂತರ ಕಾಲೇಜು ಚರ್ಚಾಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

7. 13-7-2023 ರಂದು ಕಿರಿಯ ವಿದ್ಯಾರ್ಥಿನಿಯರಿಂದ ಹಿರಿಯ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಯಿತು.

8. ದಿನಾಂಕ 19-7-2023 ರಂದು ಸಮಾರೋಪ ಸಮಾರಂಭ ಏರ್ಪಡಿಸಲಾಗಿತ್ತು. ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಶ್ರೀಮತಿ ಎನ್. ಭ್ರಮರಾಂಬ
ಸಂಚಾಲಕರು

# Cultural Forum

















# Cultural Forum















# Cultural Forum









# Physical Education Department

ಪ್ರಾಚೀನ ಕಾಲದಿಂದಲೂ ಕ್ರೀಡೆಯನ್ನು ಜೀವನದ ಆಧಾರವೆಂದು ಪರಿಗಣಿಸಲಾಗಿದೆ. ಕ್ರೀಡೆ ನಮ್ಮ ಜೀವನದ ಒಂದು ಪ್ರಮುಖ ಭಾಗವಾಗಿದೆ. ಇದು ಪ್ರತಿಯೊಬ್ಬ ಮನುಷ್ಯನ ಜೀವನಕ್ಕೆ ಬಹಳ ಅವಶ್ಯಕವಾಗಿದ್ದು, ಸದೃಢ ದೇಹ, ಜ್ಞಾಪಕ ಶಕ್ತಿ ಮತ್ತು ಏಕಾಗ್ರತೆಯನ್ನು ವೃದ್ಧಿಸಲು ಸಹಕಾರಿಯಾಗಿರುತ್ತದೆ. ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಶಿಕ್ಷಣವಷ್ಟೇ ಸಾಲದು ಜೊತೆಗೆ ಕ್ರೀಡೆ ಹಾಗೂ ದೈಹಿಕ ಶಿಕ್ಷಣವನ್ನು ನೀಡಿದರೆ ಪರಿಪೂರ್ಣ ಬೆಳವಣಿಗೆಯನ್ನು ಹೊಂದುತ್ತಾರೆ. ಆದುದರಿಂದ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಎಲ್ಲರ ಕರ್ತವ್ಯವಾಗಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಯುಜಿಸಿ ನೆರವಿನಿಂದ ಕಾಲೇಜಿನಲ್ಲಿ ಉನ್ನತ ದರ್ಜೆಯ ಜಿಮ್ನಾಸ್ಟಿಕ್ ಉಪಕರಣಗಳನ್ನು ಹಾಗೂ ಕ್ರೀಡಾ ಕೊಠಡಿಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿನಿಯರು ಇವುಗಳ ಸದುಪಯೋಗವನ್ನು ದೈಹಿಕ ಶಿಕ್ಷಣ ನಿರ್ದೇಶಕರ ಮಾರ್ಗದರ್ಶನದಲ್ಲಿ ಪಡೆಯುತ್ತಾರೆ.

ಪ್ರಸ್ತುತ 2022–23ನೇ ಶೈಕ್ಷಣಿಕ ಸಾಲಿನ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ದಿನಾಂಕ 30–9–2022 ರಂದು ಕ್ರೀಡಾ ಸಮಿತಿಯನ್ನು ರಚಿಸಿ ಕೆಳಕಂಡಂತೆ ಸಂಚಾಲಕರು ಮತ್ತು ಸದಸ್ಯರನ್ನು ನೇಮಿಸಲಾಯಿತು.

| | | | |
|---|---|---|---|
| 1. | ಶ್ರೀ ಎಸ್. ಶ್ರೀಧರ್ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| 2. | ಶ್ರೀ ಕೆ.ಆರ್. ಗುರುಪ್ರಸಾದ್ | ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| 3. | ಶ್ರೀಮತಿ ಜಿ.ಎಸ್. ಸುಮ | ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| 4. | ಶ್ರೀಮತಿ ಎನ್. ವಾಣಿ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | ಸದಸ್ಯರು |

ತರಗತಿವಾರು ಕ್ರೀಡಾ ಪ್ರತಿನಿಧಿಗಳನ್ನು ಕೆಳಕಂಡಂತೆ ಆಯ್ಕೆ ಮಾಡಲಾಯಿತು.

| | | |
|---|---|---|
| 1. | ಕು. ಎಲ್. ಭಾನುಪ್ರಿಯ | ತೃತೀಯ ಬಿ.ಎ. |
| 2. | ಕು. ಎಸ್. ಸ್ವಾತಿ | ತೃತೀಯ ಬಿ.ಕಾಂ. |
| 3. | ಕು. ಎಂ. ಶ್ರುತಿ | ದ್ವಿತೀಯ ಬಿ.ಎ. |
| 4. | ಕು. ಎ.ಪಿ. ಪೂರ್ಣಿಮ | ದ್ವಿತೀಯ ಬಿ.ಕಾಂ. |
| 5. | ಕು. ಎಂ. ರಶ್ಮಿ | ಪ್ರಥಮ ಬಿ.ಎ. |
| 6. | ಕು. ಎಂ. ಸಿಂಧು | ಪ್ರಥಮ ಬಿ.ಕಾಂ. |
| 7. | ಕು. ಪಿ. ಭವಾನಿ | ಪ್ರಥಮ ಬಿ.ಬಿ.ಎ. |

ದಿನಾಂಕ 27–11–2022 ರಿಂದ 30–11–2022ರವರೆಗೆ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆ ಪ್ರಯುಕ್ತ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾ ಕೂಟವು ಸುತ್ತೂರು ಶ್ರೀಕ್ಷೇತ್ರದಲ್ಲಿ ಜರುಗಿದ್ದು ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಥ್ರೋಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ ದರು. ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ ಟಿ.ಎಸ್. ಸಿಂಚನ ಉತ್ತಮ ಆಟಗಾರ್ತಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

# Physical Education Department

ದಿನಾಂಕ 20–12–2022 ರಂದು ಕ್ರೀಡಾ ವೇದಿಕೆ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಉದ್ಘಾಟಕರಾಗಿ ಶ್ರೀ ಎಸ್.ಎಸ್. ದಶರಥ, ವಿಭಾಗೀಯ ಸಂಚಾರ ನಿಯಂತ್ರಣಾಧಿಕಾರಿಗಳು, ಅತಿಥಿಗಳಾಗಿ ಶ್ರೀ ಎ.ಡಿ. ಶಿವಪ್ರಕಾಶ್, ಅಧ್ಯಕ್ಷರಾಗಿ ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಐಕ್ಯೂಎಸಿ ಸಂಚಾಲಕರಾದ ಶ್ರೀ ಹೆಚ್.ಜಿ. ನಟರಾಜನ್ ಉಪಸ್ಥಿತರಿದ್ದರು.

ದಿನಾಂಕ 13–1–2023 ರಂದು ಮಹಿಳಾ ಪ್ರಥಮ ದರ್ಜೆ ಕಾಲೇಜು, ಬೈರಾಪುರ ಇಲ್ಲಿ ಚಾಮರಾಜ ವಲಯ ಮಹಿಳಾ ಕ್ರೀಡಾಕೂಟ–2023ನ್ನು ಆಯೋಜಿಸಿದ್ದು ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಮತ್ತು ಕಬ್ಬಡಿಯಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

ದಿನಾಂಕ 21–6–2023 ರಂದು 9ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. 250 ವಿದ್ಯಾರ್ಥಿನಿಯರು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಿನಾಂಕ 12–7–2023 ರಂದು ದೈಹಿಕ ಶಿಕ್ಷಣ ವಿಭಾಗದಿಂದ "ಪ್ರೇರಣೆ" ಎಂಬ ಹೆಸರಿನಲ್ಲಿ ಪೋಷಕರು ಮತ್ತು ವಿದ್ಯಾರ್ಥಿನಿಯರಿಗೆ ಸಾಂಪ್ರದಾಯಿಕ ಆಟಗಳಾದ ಅಳಿಗುಳಿ ಮನೆ, ಗುಜ್ಜೆ ಕಲ್ಲಾಟ, ಹಗ್ಗ ಜಗ್ಗಾಟಗಳನ್ನು ಆಯೋಜಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಪೋಷಕರು ಭಾಗವಹಿಸಿದ್ದರು.

ದಿನಾಂಕ 15–7–2023 ರಿಂದ 17–7–2023 ರವರೆಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು ಹಾಗೂ ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಇವರ ಸಂಯುಕ್ತಾಶ್ರಯದಲ್ಲಿ ಜರುಗಿದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಬಾಲ್ ಬ್ಯಾಡ್ಮಿಂಟನ್ ಮತ್ತು ಸಾಫ್ಟ್‌ಬಾಲ್ ಆಟದಲ್ಲಿ ಸ್ಪರ್ಧಿಸಿ, ಸಾಫ್ಟ್‌ಬಾಲ್ ಆಟದಲ್ಲಿ ದ್ವಿತೀಯ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಶ್ರೀ ಎಸ್. ಶ್ರೀಧರ್
ದೈಹಿಕ ಶಿಕ್ಷಣ ನಿರ್ದೇಶಕರು

# Physical Education Department










# Physical Education Department

















# Physical Education Department








# NSS

ಸಮುದಾಯಕ್ಕೆ ಸೇವೆಯನ್ನು ಸಲ್ಲಿಸುವ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಇರುವ ಯೋಜನೆಯೇ "ರಾಷ್ಟ್ರೀಯ ಸೇವಾ ಯೋಜನೆ". ಮಹಾತ್ಮ ಗಾಂಧೀಜಿಯವರ ಆಶಯದಂತೆ ಅನುಭವ ಮತ್ತು ಪರಿಶ್ರಮಕ್ಕೆ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಹೆಚ್ಚು ಒತ್ತುಕೊಡಲಾಗಿದೆ. "ರಾಷ್ಟ್ರ ಮುಂದುವರೆಯಬೇಕಾದರೆ ನಮ್ಮ ಯುವ ಜನಾಂಗ, ಅದರಲ್ಲಿಯೂ ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯನ್ನರಿತು ಬದುಕಿನೊಡನೆ ನೇರ ಸಂಪರ್ಕವಿಟ್ಟುಕೊಳ್ಳಬೇಕು" ಎಂಬುದು ಗಾಂಧೀಜಿಯವರ ಕನಸಾಗಿತ್ತು. ಶಿಕ್ಷಣದ ಬಗೆಗಿನ ಮಹಾತ್ಮ ಅವರ ಈ ಚಿಂತನೆಯ ನಿಜವಾದ ಅನುಷ್ಠಾನವನ್ನು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಮಾತ್ರ ವಿಫುಲವಾಗಿ ಕಾಣಬಹುದು.

ವಿದ್ಯಾರ್ಥಿಗಳಲ್ಲಿ ವ್ಯಕ್ತಿಗೌರವ, ಸಹಬಾಳ್ವೆ, ಭ್ರಾತೃತ್ವ, ಜಾತ್ಯತೀತ ಮನೋಭಾವ, ಭಾವೈಕ್ಯತೆ... ಹೀಗೆ ಅನೇಕ ಉತ್ತಮ ಗುಣಗಳನ್ನು ಹುಟ್ಟುಹಾಕಿ ಸಮಾಜದೊಂದಿಗೆ ನೇರ ಸಂಪರ್ಕವನ್ನು ಪಡೆದು, ಸಮಾಜದ ನೋವು ನಲಿವುಗಳಲ್ಲಿ ಭಾಗಿಯಾಗಿ ಸಮಾಜದಲ್ಲಿನ ಅನೇಕ ಮೌಢ್ಯತೆಗಳನ್ನು ದೂರ ಮಾಡುವ ಹಾಗೂ ಭಾವನಾತ್ಮಕವಾಗಿ ಸಮಾಜದ ಜೊತೆಗೆ ಸ್ಪಂದಿಸುವ ನಿಟ್ಟಿನಲ್ಲಿ ನಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಶ್ರಮಿಸುತ್ತಿದೆ.

ನಮ್ಮ ರಾಷ್ಟ್ರೀಯ ಸೇವಾ ಯೋಜನೆಯ ಘಟಕದಲ್ಲಿ 100 ಮಂದಿ ಸ್ವಯಂ ಸೇವಕಿಯರು ನೋಂದಣಿಯನ್ನು ಪಡೆದಿದ್ದಾರೆ. ರಾ.ಸೇ.ಯೋ.ಯ ಕಾರ್ಯಗಳ ನಿರ್ವಹಣೆಗಾಗಿ ಕಾಲೇಜಿನಲ್ಲಿ ಈ ಕೆಳಕಂಡ ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರ ಸಲಹೆ ಮೇರೆಗೆ ರಾ.ಸೇ.ಯೋ. ಘಟಕ ತನ್ನ ಕಾರ್ಯನಿರ್ವಹಿಸುತ್ತಿದೆ.

**ರಾಷ್ಟ್ರೀಯ ಸೇವಾ ಯೋಜನೆ ಸಲಹಾ ಸಮಿತಿ**

| | | |
|---|---|---|
| 1) ಡಾ. ಎಂ. ಪ್ರಭು | ಪ್ರಾಂಶುಪಾಲರು | ಅಧ್ಯಕ್ಷರು |
| 2) ಶ್ರೀ ಹೆಚ್.ಜಿ. ನಟರಾಜನ್ | ಮುಖ್ಯಸ್ಥರು, ಇತಿಹಾಸ ವಿಭಾಗ | ಸಂಚಾಲಕರು |
| 3) ಶ್ರೀ ಸಿ.ಎಸ್. ಬಸವದತ್ತ ಮಹದೇವಪ್ರಸಾದ್ | ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಕಾರ್ಯಕ್ರಮಾಧಿಕಾರಿ |
| 4) ಶ್ರೀ ಹೆಚ್.ಎಂ. ನಾಗಭೂಷಣ | ಮುಖ್ಯಸ್ಥರು, ಕನ್ನಡ ವಿಭಾಗ | ಸದಸ್ಯರು |
| 5) ಶ್ರೀಮತಿ ಎಸ್. ಮಮತ | ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| 6) ಶ್ರೀಮತಿ ಎನ್. ಭ್ರಮರಾಂಬ | ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

ದಿನಾಂಕ 20–10–2022 ರಂದು 'ವಿಶ್ವ ಆಹಾರದಿನ'ವನ್ನು ಆಚರಿಸಲಾಯಿತು.

ದಿನಾಂಕ 30–10–2022 ರಂದು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ "ಸರ್ದಾರ್ ವಲ್ಲಭಬಾಯ್ ಪಟೇಲರ ಜನ್ಮದಿನಾಚರಣೆಯ ಅಂಗವಾಗಿ "ರಾಷ್ಟ್ರೀಯ ಏಕತಾ ದಿವಸ" ಆಚರಣೆ ಮಾಡಲಾಯಿತು.

ದಿನಾಂಕ 26–11–2022 ರಂದು "ಸಂವಿಧಾನ ದಿನಾಚರಣೆ"ಯನ್ನು ಆಚರಿಸಲಾಯಿತು.

ದಿನಾಂಕ 12–01–2023 ರಂದು "ಸ್ವಾಮಿ ವಿವೇಕಾನಂದರ 160ನೇ ಜಯಂತಿ ಕಾರ್ಯಕ್ರಮ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಗೀತಾ ಹುಡೇದ ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಇವರು ಭಾಗವಹಿಸಿದ್ದರು.

## NSS

ದಿನಾಂಕ 23-01-23 ರಂದು "ಸುಭಾಷ್ ಚಂದ್ರ ಬೋಸ್"ರವರ 126ನೇ ಜಯಂತಿಯನ್ನು ಆಚರಿಸಲಾಯಿತು.

ದಿನಾಂಕ 25-01-23 ರಂದು "13ನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಯಿತು.

ದಿನಾಂಕ 05-06-23 ರಂದು "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಕೊಳ್ಳೇಗಾಲ ವನ್ಯಜೀವಿ ವಲಯ ಇವರ ಸಹಯೋಗದಲ್ಲಿ "ಗುಂಡಾಲ್ ಜಲಾಶಯ" ಪ್ರದೇಶದಲ್ಲಿ ಪ್ಲಾಸ್ಟಿಕ್, ಇತ್ಯಾದಿ ತ್ಯಾಜ್ಯ ನಿರ್ಮೂಲನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 30-06-23 ರಂದು ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಮೈಸೂರು ಇವರ ಸಹಯೋಗದಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ವೈದ್ಯಕೀಯ ತಪಾಸಣೆಯನ್ನು ಏರ್ಪಡಿಸಲಾಯಿತು.

ದಿನಾಂಕ 22-12-22 ರಿಂದ 28-12-22 ರವರೆಗೆ "ವಿಶೇಷ ವಾರ್ಷಿಕ ಶಿಬಿರ"ವನ್ನು ಕೊಳ್ಳೇಗಾಲ ತಾಲ್ಲೂಕಿನ "ಬೂದಿತಿಟ್ಟು" ಗ್ರಾಮದಲ್ಲಿ ಹಮ್ಮಿಕೊಂಡಿದ್ದು, ಈ ಶಿಬಿರದಲ್ಲಿ ಅಗ್ನಿ ದುರಂತ ಕುರಿತ ಜಾಗೃತಿ, ಗಿಡ ನೆಡುವ ಕಾರ್ಯಕ್ರಮ, ಮತದಾನ ಜಾಗೃತಿ ಕುರಿತ ಜಾಥಾ, ಶ್ರಮದಾನ, ಕಾನೂನು ಅರಿವು, ಮಹಿಳಾ ಸಬಲತೆ, ಮಾನವ ವನ್ಯಜೀವಿ ಸಂಘರ್ಷ ನಿರ್ವಹಣೆ, ಸಮಾಜ ಸೇವೆ ಮತ್ತು ವ್ಯಕ್ತಿತ್ವ ವಿಕಸನ ಮುಂತಾದ ವಿಷಯಗಳ ಮೇಲೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಲಾಯಿತು.

ಹೀಗೆ ಕಾಲೇಜಿನಲ್ಲಿ ರಾ.ಸೇ.ಯೋ. ಘಟಕದ ವತಿಯಿಂದ ಶ್ರಮದಾನ, ವಿಶೇಷ ಉಪನ್ಯಾಸ, ಜಾಥಾ ಹೀಗೆ ಹತ್ತು-ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಶ್ರೀ ಸಿ.ಎಸ್. ಬಸವದತ್ತ ಮಹದೇವ ಪ್ರಸಾದ್**
ಕಾರ್ಯಕ್ರಮಾಧಿಕಾರಿ

## Alumni Association

2022-23ನೇ ಸಾಲಿನಲ್ಲಿ ಹಿರಿಯ ವಿದ್ಯಾರ್ಥಿನಿಯರ ವೇದಿಕೆಯಡಿಯಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು.

* ದಿನಾಂಕ 29-11-2023 ರಂದು ಚಾರ್ಟೆಡ್ ಅಕೌಂಟೆಂಟ್ಸ್ ಕೋರ್ಸಿಗೆ ಸಂಬಂಧಿಸಿದಂತೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಬೆಂಗಳೂರಿನ ಶ್ರೀ ಎನ್. ಅಶ್ವತ್‌ರಾಜ್ ಅವರು ಉಪನ್ಯಾಸ ನೀಡಿದರು.
* ದಿನಾಂಕ 6-5-2023 ರಂದು 'ಫೈನಾನ್ಸಿಯಲ್ ವೆಲ್‌ನೆಸ್' ವಿಷಯ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಯಿತು. ಶ್ರೀ ಕಾರ್ತಿಕ್ ರವರು ಉಪನ್ಯಾಸ ನೀಡಿದರು.

**ಶ್ರೀಮತಿ ಎಸ್. ವಾಣಿ**
ಸಂಚಾಲಕರು

# CET CELL

JSS College for Women, Kollegal has taken a new initiative Known as "Competitive Examination Training Cell (CET Cell)" for all the students aspiring for competitive exams, which is dedicated for conducting training classes and other activities for grooming the students for various competitive exams. The Primary focus is imparting training to students for taking up UPSC KPSC and other competitive exams

**Objectives**

"Behind every successful student, there is always be a coaching cell"

To survive in the competitive world it's important that the students want to prove their skills and knowledge. The objectives of the cell are…

1. To make available a platform for aspirants of UPSC, KPSC and other competitive examinations
2. To create awareness among rural girl students with respect to competitive examinations
3. To Arrange Training classes on various topics by eminent personalities
4. To Provide comprehensive and quality study material and guidance for students

To enhance the employability of students and to empower the rural women through holistic development.

**Selection of Aspirants / Students:**

Competitive exams are the life blood of college admissions. They are a way for colleges to identity and select potential prospects out of many.

**Selection Procedure**

1. Issue of application through online / Offline
2. Aspirants are required to submit the filled application from
3. Conduct of Entrance test
4. Selection of students from top 100

Arraigning Orientation Programme for Aspirants

**Infrastructure**

1. Auditorium with all necessary equipments
2. Internet Facility with Wi-Fi (300mbps)
3. ICT Enabled lecture hall
4. Seminar Hall with Smart Board Television
5. Computer Lab

# CET


















# CET







# Newspaper clippings

## ಗುರಿ ನಿರ್ಧರಿಸಿಕೊಳ್ಳಿ: ಎಸಿ ಗೀತಾ ಹುಡೇದ ಕಿವಿಮಾತು



ಕೊಳ್ಳೇಗಾಲ: 'ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿಗೆ ಹಾಗೂ ಅವುಗಳ ಆಯಾಮಗಳ ಬಗ್ಗೆ ಪದವಿ ಹಂತದಲ್ಲೇ ವಿದ್ಯಾರ್ಥಿಗಳು ಅರಿತುಕೊಳ್ಳಬೇಕಿದೆ' ಎಂದು ಉಪವಿಭಾಗಾಧಿಕಾರಿ ಗೀತಾ ಹುಡೇದ ತಿಳಿಸಿದರು.

ನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಗುರುವಾರ ಎನ್ಎಸ್ಎಸ್‌ನಿಂದ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 160ನೇ ಜಯಂತಿ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿನಿಯರು ಮೊದಲು ತಮ್ಮ ಗುರಿ ನಿರ್ಧರಿಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಯೋಜಿತ ಪೂರ್ವ ಸಿದ್ಧತೆಯೇ ಮುನ್ನುಡಿ' ಎಂದರು.

'ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನ ಆಚರಿಸುತ್ತಿದ್ದು, ಅವರ ಜೀವನ, ದೇಶಭಕ್ತಿ, ಆಧ್ಯಾತ್ಮಿಕತೆ ಮತ್ತು ಸಮರ್ಪಣೆ ಯಾವಾಗಲೂ ನಮಗೆ ಸ್ಫೂರ್ತಿ ನೀಡುತ್ತದೆ' ಎಂದು ಹೇಳಿದರು.

ಪ್ರಾಂಶುಪಾಲ ಡಾ.ಎಂ.ಪ್ರಭು, ಇತಿಹಾಸ ವಿಭಾಗದ ಮುಖ್ಯಸ್ಥ ನಟರಾಜನ್, ಸಿಡಿಸಿ ಘಟಕದ ಸಂಚಾಲಕ ಮಹದೇವಸ್ವಾಮಿ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಬಸವದತ್ತ ಮಹದೇವಪ್ರಸಾದ್ ಇದ್ದರು.

## ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ



ಪರಿಸರ ದಿನಾಚರಣೆ ಹಿನ್ನೆಲೆ ಕೊಳ್ಳೇಗಾಲ ತಾಲೂಕಿನ ಗುಂಡಾಲ್ ಜಲಾಶಯ ಪ್ರದೇಶದಲ್ಲಿ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.

■ ವಿಜಯವಾಣಿ ಸುದ್ದಿಜಾಲ ಕೊಳ್ಳೇಗಾಲ

ಕೊಳ್ಳೇಗಾಲ ವನ್ಯಜೀವಿ ವಲಯ ಕಚೇರಿ ಹಾಗೂ ಪಟ್ಟಣದ ಜೆಎಸ್ಎಸ್ ಮಹಿಳಾ ಕಾಲೇಜಿನ ಎನ್ಎಸ್ಎಸ್ ಘಟಕದ ಸಹಯೋಗದಲ್ಲಿ ತಾಲೂಕಿನ ಗುಂಡಾಲ್ ಜಲಾಶಯ ಪ್ರದೇಶದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಗುಂಡಾಲ್ ಜಲಾಶಯ ಬಳಿ ಹಾಗೂ ಸುತ್ತಮುತ್ತಲ ಪರಿಸರದಲ್ಲಿ ಸಾರ್ವಜನಿಕರು ಉಪಯೋಗಿಸಿ ಬಿಸಾಡಿದ್ದ ಪ್ಲಾಸ್ಟಿಕ್, ಬಾಟಲ್ [illegible] ತ್ಯಾಜ್ಯಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಜೆಎಸ್ಎಸ್ ವಿದ್ಯಾರ್ಥಿನಿಯರು ಸಂಗ್ರಹಿಸಿದರು. ಸುಮಾರು ಒಂದು ಟ್ರ್ಯಾಕ್ಟರ್‌ನಷ್ಟು ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು. ನಂತರ ಅರಣ್ಯ ಪ್ರದೇಶದಲ್ಲಿ ಬೀಜ ಬಿತ್ತನೆ ಹಾಗೂ ಗಿಡ ನೆಡಲಾಯಿತು.

[illegible] ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ [illegible] ಮಾತನಾಡಿ, ಅರಣ್ಯ ರಕ್ಷಣೆಯಿಂದ ಮಾತ್ರ ನಾವು ಸಮೃದ್ಧಿಯಾಗಲು ಸಾಧ್ಯ ಎಂದರು. [illegible] ವಲಯದ ಅರಣ್ಯಾಧಿಕಾರಿ [illegible], ಜೆಎಸ್ಎಸ್ ಮಹಿಳಾ ಕಾಲೇಜಿನ ಎನ್ಎಸ್ಎಸ್ ಸಂಚಾಲಕ ಬಸವದತ್ತ ಮಹಾದೇವಪ್ರಸಾದ್, [illegible] ಇದ್ದರು.

## 'ಉತ್ತಮ ಜೀವನ ರೂಪಿಸಿಕೊಳ್ಳಿ'

### ಜೆಎಸ್ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಭು ಕಿವಿಮಾತು




[illegible]

## ಅಂತರವಲಯ ಮಟ್ಟದಲ್ಲಿ ಜೆಎಸ್ಸೆಸ್ ಸಾಧನೆ



ಕೊಳ್ಳೇಗಾಲ: ಅಂತರ ವಲಯ ಮಹಿಳಾ ಕ್ರೀಡಾ ಕೂಟದಲ್ಲಿ ಜೆಎಸ್ಎಸ್ ಕಾಲೇಜಿನ ವಿದ್ಯಾರ್ಥಿಗಳು ಸಾಧನೆಗೈದಿದ್ದಾರೆ. ಜು. 15ರಿಂದ 17ರವರೆಗೆ 3 ದಿನಗಳ ಕಾಲ ಜರುಗಿದ ಅಂತರ ವಲಯ ಕ್ರೀಡಾಕೂಟದಲ್ಲಿ ಸಾಫ್ಟ್ ಬಾಲ್ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗಳಿಸಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಪ್ರಾಂಶುಪಾಲ ಡಾ. ಎಂ.ಪ್ರಭು, ಕ್ರೀಡಾ ಸಂಚಾಲಕ ಶ್ರೀಧರ್ ಮತ್ತು ಉಪನ್ಯಾಸಕರುಗಳು ಅಭಿನಂದಿಸಿದ್ದಾರೆ.

# Newspaper clippings

## ಪ್ರವೀಣ್ ಕೃಪಾಕರ್ ಎಚ್ಚರಿಕೆ | ಜೆಎಸ್ಎಸ್ ಸಂಸ್ಥೆಯಲ್ಲಿ ಪರಿಸರ ದಿನ

# ಹಸಿರು ನಾಶದಿಂದ ನೀರಿಗೆ ಹಾಹಾಕಾರ



## Photo expo on tribals in Kollegal



A two-day photo exhibition will be inaugurated in Kollegal on Friday to highlight the development works taken by the government since 2014 to mark 75th year of Independence. A publicity campaign to draw people's attention of the programme was flagged of on Thursday. The expo will be held at JSS College and is also being organised to mark Janjatiya Gaurav Divas and the photo expo will also showcase tribal development works initiated by the government.

# ವಿದೇಶಿ ಹೂಡಿಕೆಗೆ ಜಿ-20 ಸಹಕಾರಿ



## ತೆರೆಮರೆಗೆ ಸರಿದ ಗ್ರಾಮೀಣ ಆಟಗಳು



# ಪದವಿ ಪತ್ರಕ್ಕಿಂತ ಜ್ಞಾನ ಮೌಲ್ಯವಾದುದು



## ತೆರೆಮರೆಗೆ ಸರಿದ ಗ್ರಾಮೀಣ ಆಟಗಳು



# Facilities offered in College

## ಕಾಲೇಜಿನಲ್ಲಿ ದೊರೆಯುವ ಸೌಲಭ್ಯಗಳು

- ನುರಿತ ಹಾಗೂ ಅರ್ಹ ಅಧ್ಯಾಪಕ ವೃಂದ
- ಸ್ವಚ್ಛ ಮತ್ತು ಹಸಿರು ಕ್ಯಾಂಪಸ್
- ಸುಸಜ್ಜಿತ ಮಹಿಳಾ ವಸತಿ ನಿಲಯ
- ಇ-ಸಂಪನ್ಮೂಲ ಸಹಿತ ಗಣಕೀಕೃತ ಗ್ರಂಥಾಲಯ
- ICT ವ್ಯವಸ್ಥೆಯುಳ್ಳ ತರಗತಿ ಕೊಠಡಿಗಳು
- ಕಂಪ್ಯೂಟರ್ ಲ್ಯಾಬ್ (ERP.9 Tally, SPSS ಉಚಿತ ತರಬೇತಿ)
- ಭಾಷಾ ಪ್ರಯೋಗಾಲಯ
- ಉಪಹಾರ ಮಂದಿರ
- ಸುಸಜ್ಜಿತ ಜಿಮ್ ಸೌಲಭ್ಯ ಹಾಗೂ ಕ್ರೀಡಾ ಮೈದಾನ
- ವಿಶ್ರಾಂತಿ ಕೊಠಡಿ ಸೌಲಭ್ಯ
- ಆಪ್ತ ಸಮಾಲೋಚನ ಕೇಂದ್ರ
- ವಿದ್ಯಾರ್ಥಿ ವೇತನ ಸೌಲಭ್ಯ
- ಕ್ಯಾಂಪಸ್ ಆಯ್ಕೆ ಸೌಲಭ್ಯ
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರ
- ಕ್ರೀಡಾ ತರಬೇತಿ

